**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಸಿಸಿ ನಂ 43/2022**

ಸಿ.ಡಬ್ಲೂಃ **05** ಪಿಡಬ್ಲೂಃ **07**

| | |
|---|---|
| ಸಾಕ್ಷಿದಾರರ ಹೆಸರು | ಪಾಪೇಗೌಡ |
| ತಂದೆಯ ಹೆಸರು | ಲಕ್ಷ್ಮೀನಾರಾಯಣಪ್ಪ |
| ವಯಸ್ಸು | 45 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಕಲ್ಲುಕೋಟೆ |

**ದಿನಾಂಕಃ 09.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ** ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರವರಿಂದ

ಸಾಕ್ಷಿಯು ನಿಪಿ-2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2001 ರಲ್ಲಿ ಚಾಸಾ-1 ರವರ ಮನೆಯ ಮುಂದೆ ಹಾಕಿರುತ್ತೇನೆ. ಆರೋಪಿ ಮತ್ತು ಚಾಸಾ-1 ರವರ ಗಲಾಟೆ ವಿಚಾರವಾಗಿ ಸದರಿ ಸಹಿಯನ್ನು ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಿಪಿ-2 ಕ್ಕೆ ಚಾಸಾ-4, 8, 9 ರವರು ಸಹಿ ಮಾಡಿರುತ್ತಾರೆ. 11-00 ರಿಂದ 12-00 ಗಂಟೆಯವರೆಗೂ ಸದರಿ ಮಹಜರ್ ಅನ್ನು ಬರೆದಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

ನಿಪಿ-2 ರಲ್ಲಿರುವ ವಿಚಾರಗಳನ್ನು ಓದಿ ಹೇಳಿರುತ್ತಾರೆ. ನಿಪಿ-2 ನ್ನು ಕೈಯಲ್ಲಿ ಬರೆದಿರುತ್ತಾರೆ. ನಿಪಿ-2 ನ್ನು ಬರೆಯುವ ಸಮದಲ್ಲಿ ನಾನು ಸ್ಥಳದಲ್ಲಿ ಹಾಜರಿರುವುದಿಲ್ಲ ಮತ್ತು ಸದರಿ ಸಹಿಯನ್ನು ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನೀವು 2021 ರಲ್ಲಿ ಸಹಿ ಮಾಡಿದ್ದು 2001 ರಲ್ಲಿ ಯಾವುದೇ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ಚಾಸಾ-8 ಮತ್ತು 9 ನಿಪಿ-2 ಕ್ಕೆ ಸಹಿ ಮಾಡದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ನ್ನು ಬೆರಳಚ್ಚು ಮಾಡಿಸಿ ತಂದಿರುತ್ತಾರೆಂದರೆ ನಾನು ಮಾತ್ರ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-2 ನ್ನು ಪೋಲೀಸ್ ಠಾಣೆಯಲ್ಲಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿರುವ ವಿಚಾರಗಳು

ಗೊತ್ತಿಲ್ಲದಿದ್ದರೂ ಪಿರ್ಯಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**